# 1

# ದೇವರು

ನಾನು ಪ್ರಾರ್ಥನೆಯಲ್ಲಿ ನಂಬಿಕೆಯಿಡುವುದಿಲ್ಲ ... ನಾನು ದೇವರಲ್ಲಿ ನಂಬುತ್ತೇನೆ; ಆದುದರಿಂದ, ನಾನು ಪ್ರಾರ್ಥಿಸುತ್ತೇನೆ. ಈ ಸರಳ ಸತ್ಯವು ಪ್ರಾರ್ಥನೆಯ ನಮ್ಮ ದುರುಪಯೋಗವನ್ನು ವಿವರಿಸುತ್ತದೆ. (1) ದೇವರನ್ನು ತಿಳಿಯುವಲ್ಲಿ ಮತ್ತು (2) ನಂಬಿಕೆಯನ್ನು ಅರ್ಥಮಾಡಿಕೊಳ್ಳುವಲ್ಲಿ, ನಾವು ಸೋತುಹೋಗುತ್ತೇವೆ. ಪ್ರಾರ್ಥನೆಯು ದೇವರ ಮೇಲೆ ನಮ್ಮ ಅವಲಂಬನೆಯೂ ವಿಶ್ವಾಸದ ನಮ್ಮ ಧ್ವನಿಯೂ ಆಗಿರುತ್ತದೆ. ದೇವರ ಬಗೆಗಿನ ನಮ್ಮ ಜ್ಞಾನವು ದೇವರೊಂದಿಗೆ ಮಾತಾಡುವ ನಮ್ಮ ರೂಢಿಯನ್ನು ನಿರ್ಧರಿಸುತ್ತದೆ. ವಿಷಯವು, ಸರಳವಾಗಿ ಇಡುವುದಾದರೆ ಅದು ದೇವರು ಆಗಿರುತ್ತದೆ! ಸರ್ವಶಕ್ತ, ಸರ್ವಾತಿಶಯನಾದ, ನಿತ್ಯನಾದ, ಸರ್ವಶಕ್ತನಾದ, ಸರ್ವ ಜ್ಞಾನಿಯಾದ, ನ್ಯಾಯವಂತನಾದ, ದಯೆಯುಳ್ಳ ದೇವರು, ಸೃಷ್ಟಿಸುವ, ರಕ್ಷಿಸುವ, ನ್ಯಾಯತೀರಿಸುವ ದೇವರು! ಅಬ್ರಹಾಮನ ಇಸಾಕನ ಮತ್ತು ಯಾಕೋಬನ ಬೈಬಲಿನ ದೇವರು! *ಯೆಹೋವ ದೇವರು!* ಯಾವುದೇ ಪ್ರಾರ್ಥನೆಯ ಅಧ್ಯಯನವು ದೇವರೊಂದಿಗೆ ಜ್ಞಾನದ ಸಂಬಂಧದೊಂದಿಗೆ ಪ್ರಾರಂಭವಾಗುತ್ತದೆ. ನಾವು ದೇವರನ್ನು ಹುಡುಕತಕ್ಕದ್ದು, ದೇವರನ್ನು ತಿಳಿಯತಕ್ಕದ್ದು, ದೇವರನ್ನು ನಂಬತಕ್ಕದ್ದು, ದೇವರಿಗೆ ವಿಧೇಯರಾಗತಕ್ಕದ್ದು. ಇದಿಲ್ಲದೇ, ಪ್ರಾರ್ಥನೆಯು ಏನೂ ಆಗಿರುವುದಿಲ್ಲ. ಪ್ರಾರ್ಥನೆಯ ಗಾಂಭೀರ್ಯತೆಯು ದೇವರ ಗಂಭೀರತೆಯಾಗಿರುತ್ತದೆ.

ಆದುದರಿಂದ, ದೇವರ ಮೇಲೆ ಕೇಂದ್ರೀಕರಿಸಿರಿ. ನಾವು ದೇವರನ್ನು ನೋಡುತ್ತೇವೆ ಮತ್ತು ಆಗ ಆರಾಧಿಸುತ್ತೇವೆ. ನಾವು ಆರಾಧಿಸಿದನಂತರ ದೇವರನ್ನು ನೋಡುವುದಿಲ್ಲ. ಅವರು ದೇವರ ಮುಂದೆ ಬಂದಾಗ, ಸಿನಾಯಿಯಲ್ಲಿ ಮೋಶೆಯು ನಡುಗಿದನು, ದಾನಿಯೇಲನು ಮೂರ್ಛೆಹೋದನು ಮತ್ತು ಅಪೊಸ್ತಲ ಯೋಹಾನನು ಸತ್ತಂಥವನಾದನು. ಅವರು ಜೀವಿಸುವ ದೇವರ ಸಾರ್ವಭೌಮತೆಯನ್ನು ಎದುರಿಸಿದರು! ಪ್ರಾರ್ಥನೆಯು ದೇವರಿಂದ, ದೇವರಲ್ಲಿಯ ನಮ್ಮ ನಂಬಿಕೆಯಿಂದ ನಿರೂಪಿಸಲ್ಪಟ್ಟಿದೆ. ನಮ್ಮ ಪ್ರಾರ್ಥನೆಗಳು ದೇವರಿಗೆ ನಮ್ಮ ಉತ್ತರಗಳಾಗಿವೆ. ಇದು ಪ್ರಾರ್ಥನೆಯ ಆರಂಭವಾಗಿದೆ. ನಾನು ಮಿತಿಯುಳ್ಳವನು, ಬಲಹೀನನು, ಅಜ್ಞಾನಿಯು, ಪಾಪಿಯು, ಕಳೆದು ಹೋದವನು, ಶಪಿಸಲ್ಪಟ್ಟವನು, ಬಿದ್ದು ಹೋದ ಮನುಷ್ಯನಿಗೆ ಸಾರ್ವಭೌಮನಾದ ದೇವರ ಅಗತ್ಯತೆಯಿದೆ! ಅವನಿಗೆ ಒಬ್ಬಾತನಿದ್ದಾನೆ! ತಪ್ಪಿ ಹೋದ ಮನುಷ್ಯನಿಗೆ ಒಬ್ಬ ರಕ್ಷಕನ ಅಗತ್ಯತೆ ಇರುತ್ತದೆ! ಅವನಿಗೆ ಒಬ್ಬಾತನಿದ್ದಾನೆ! ಅನುಭವಾತೀತನಾದ (ಬಾಹ್ಯನಾದ/ಉದ್ದೇಶಿತನಾದ) ದೇವರು ಸಂಪೂರ್ಣ ಸತ್ಯಕ್ಕೆ ತಳ ಹದಿಯಾಗಿದ್ದಾನೆ. ಅಂಥ ಅಧಿಕಾರವುಳ್ಳ ದೇವರು ಇಲ್ಲದೇ ನೀತಿಗಳೂ ನೈತಿಕತೆಗಳೂ ಇರಲಾರವು. ನಿತ್ಯನಾದ ದೇವರು ನಿತ್ಯವಾದ ಸತ್ಯವನ್ನು ಪ್ರಕಟಿಸುತ್ತಾನೆ. ಬಿದ್ದುಹೋದ ಮನುಷ್ಯನು ದೇವರನ್ನು *ತಿಳಿಯಬೇಕು* - ದೇವರನ್ನು *ಭಾವಿಸಬಾರದು.* ಇಂದಿನ ಜನರೊಂದಿಗೆ ವಿಚಾರಗಳು "ಹೊರಗೆ" ಇವೆ ಮತ್ತು ಭಾವನೆಗಳು "ಒಳಗೆ" ಇವೆ. ಪರಿಶುದ್ಧ ಬರಹಗಳಲ್ಲಿ ಯಾರಾದರೂ "ದೇವರನ್ನು ಅನುಭವಿಸಿದ್ದನ್ನು" ನಾವು ಎಲ್ಲಿಯೂ ಕಂಡುಕೊಂಡಿರುವದಿಲ್ಲ.

ಅಧಿಕಾರದ "ಅನುಭವಾತೀತನಾದ ದೇವರ"ನ್ನು ಜನರು ತಿರಸ್ಕರಿಸುತ್ತಾರೆ. ವಿಶ್ವವ್ಯಾಪಿಯಾದ ದೇವರ ಮೇಲೆ, ವ್ಯಕ್ತಿ ನಿಷ್ಠ ಭಾವನೆಯ ಮೇಲೆ ಅವರು ಕೇಂದ್ರೀ

ಕರಿಸುತ್ತಾರೆ. ಪರಿಶುದ್ಧ ಬರಹಗಳ ಸಾರ್ವಭೌಮ ದೇವರು ನಮ್ಮ "ಕಲ್ಪನಾ ಶಕ್ತಿಯ ದೇವರಾಗಿ" ಕೆಳಗಿಳಿಸಲ್ಪಡುವನು ಎಂದು ಬೇರೆ ಮಾತುಗಳಲ್ಲಿ ಹೇಳಬಹುದು. ದೇವರಂತಾಗಿರಲು ನಾವು ಮೇಲಕ್ಕೇರಿಸಲ್ಪಡುವದರ ಬದಲು, ದೇವರನ್ನು ನಮ್ಮಂತೆ ಮಾಡಲು ಕಡಿಮೆಗೊಳಿಸುತ್ತೇವೆ. ಅದು, "ಕೇಳು, ದೇವರೇ, ನಿನ್ನ ಸೇವಕನು ಮಾತಾಡುತ್ತಾನೆ" ಎಂಬುದೋ? ಇಲ್ಲವೇ "ದೇವರೇ ಮಾತನಾಡು, ನಿನ್ನ ಸೇವಕನು ಕೇಳುತ್ತಾನೆ" ಎಂಬುದೋ? ನೀವು ಯಾವುದನ್ನು ಆಯ್ದುಕೊಳ್ಳುತ್ತೀರಿ? "ದೇವರು ನನ್ನ ಸಹ ಚಾಲಕನು" ಎಂದು ನೀನು ಹೇಳಿದರೆ, ಆಗ ನೀನು ಆಸನಗಳನ್ನು ಬದಲಾಯಿಸಬೇಕು! ದೇವರ ಸಾನ್ನಿಧ್ಯವನ್ನು ಬಾವಿಸುವೆವೆಂದು ಹೇಳುವ ಅನೇಕರು, ಆತನ ಧ್ವನಿಯನ್ನು ಕೇಳುವುದನ್ನು ತಿರಸ್ಕರಿಸುವದು ದುಃಖಕರವಾದದ್ದಾಗಿದೆ. ಇಡೀ ಬೈಬಲಿಗೆ ಬಿದ್ದು ಹೋದ ಮನುಷ್ಯನಿಗಾಗಿ ಒಂದು ಬುದ್ಧಿವಾದವಿದೆ: *"ಆಲಿಸು!"* ಕೇಳಲು, ನಂಬಲು ವಿಧೇಯನಾಗಲು ಮತ್ತು ಜೀವಿಸಲು ಮನುಷ್ಯನು ದೇವರ ಮುಂದೆ ತನ್ನನ್ನು ತಗ್ಗಿಸಿಕೊಳ್ಳಬೇಕು.

ಪ್ರಾರ್ಥನೆಯೊಂದಿಗೆ ಜಾಗರೂಕತೆಯಿಂದ ಇರಿ! ಪ್ರಾರ್ಥನೆಯನ್ನು ಭಕ್ತಿ ಭಾವದಿಂದ ಕೈಕೊಳ್ಳಿರಿ! ದೇವರ ಸನ್ನಿಧಿಯಲ್ಲಿ ಅವಸರದಿಂದ ನುಗ್ಗಬೇಡಿರಿ. ನಮ್ಮ ದೇವರು "ಜೀವಿಸುವ ಬೆಂಕಿ" ಆಗಿರುವುದರಿಂದ ಪ್ರಾರ್ಥನೆಯು ಭಕ್ತಿಯಿಂದ ಕಾಣಲ್ಪಟ್ಟಿದೆ. "ದೇವರಿಗೆ ಭಯಪಡಿರಿ!" ಮೊಣಕಾಲೂರಿರಿ ... ಅಡ್ಡ ಬೀಳಿರಿ ... ನಡುಗಿರಿ ... ಮೌನದಿಂದ ಇರಿ ಮತ್ತು ಕೃತಜ್ಞತೆಯಿಂದ ಆಶ್ಚರ್ಯಪಡಿರಿ ... ಸಮರ್ಪಿಸಿಕೊಳ್ಳಿರಿ ... ತ್ಯಜಿಸಿರಿ ... ಒಪ್ಪಿಕೊಳ್ಳಿರಿ ... ಆನಂದಿಸಿರಿ ... ದೇವರನ್ನು ಕೊಂಡಾಡಿರಿ! ಕುಗ್ಗಿಸಲ್ಪಟ್ಟ ದೇವರು ಸ್ವಾರ್ಥಪರ ಪ್ರಾರ್ಥನೆಯಲ್ಲಿ ಪರಿಣಾಮಗೊಳ್ಳುತ್ತಾನೆ! *ದೇವರು ... ಮಾರ್ಪಾಟಾಗದ ದೇವರು!* ಇಲ್ಲಿ ಪ್ರಾರ್ಥನೆಯು ಪ್ರಾರಂಭವಾಗುತ್ತದೆ, ಮುಂದುವರಿಯುತ್ತದೆ. ಹಾಗೂ ಅಂತ್ಯಗೊಳ್ಳುತ್ತದೆ. ಯೇಸುವು ಸರಳವಾಗಿ ಪ್ರಾರ್ಥಿಸಿದನು. "ನಿನ್ನ ಚಿತ್ತವು ನೆರವೇರಲಿ" "ನಿನ್ನ ಚಿತ್ತವು ಬದಲಾಗಲಿ" ಎಂದು ನಾವು ಪ್ರಾರ್ಥಿಸತಕ್ಕದ್ದಲ್ಲ.

ಆದುದರಿಂದ, ಪ್ರಾರ್ಥನೆಯು ಒಂದು ಕಾರ್ಯವಿಧಾನವಾಗಿರುವುದಿಲ್ಲ; ಅದು ಒಂದು ಸಂಬಂಧವಾಗಿರುತ್ತದೆ. ಮನುಷ್ಯನು ತನ್ನ ನಿರ್ಮಾಣಿಕನ ಮುಂದೆ ತಗ್ಗಿಸಿಕೊಳ್ಳ ಬೇಕು. ಪ್ರಾರ್ಥನೆಯಲ್ಲಿ ಮನುಷ್ಯನು ತನ್ನ ಕೆಲಸಕ್ಕೆ ಹಾಜರಾಗುತ್ತಾನೆ. "ನನ್ನ ಚಿತ್ತವಲ್ಲ ನಿನ್ನ ಚಿತ್ತವೇ ನೆರವೇರಲಿ"; "ದೇವರೇ ನಿನ್ನ ಅಗತ್ಯತೆ ನನಗಿದೆ, ದೇವರೇ ನೀನು ನನಗೆ ಬೇಕು!" ಎಂದು ಅವನು ಹೇಳುತ್ತಾನೆ. ಆತ್ಮೀಕತೆಯ ತಿರುಳು ಅವಲಂಭನೆಯಾಗಿದೆ. ದೇವರನ್ನು ತಿಳಿಯುವುದು ನಾವು ಯೋಚಿಸುವ, ಜೀವಿಸುವ ಮತ್ತು ಇತರರನ್ನು ನಡಿಸಿಕೊಳ್ಳುವ ಮಾರ್ಗವನ್ನು ಬದಲಾಯಿಸುತ್ತದೆ. ದೇವರ ಅಗತ್ಯತೆಯುಳ್ಳ ಜನರು ಪ್ರಾರ್ಥಿಸಬೇಕು! ಜನರು ತಾವು ಆರಾಧಿಸುವ ದೇವರಂತೆ ಆಗುವರು. ಪ್ರಾರ್ಥನೆಯ ಅಧ್ಯಯನವು ದೇವರ ಬಗ್ಗೆ ಆಳವಾದ ಅಧ್ಯಯನವಾಗಿರುತ್ತದೆ.

# “ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು”

## ಲೂಕ 11:1-13

*“ಆತನು ಒಂದಾನೊಂದು ಸ್ಥಳದಲ್ಲಿ ಪ್ರಾರ್ಥನೆ ಮಾಡಿ ಮುಗಿಸಿದಾಗ ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ, ‘ಸ್ವಾಮೀ, ಯೋಹಾನನು ತನ್ನ ಶಿಷ್ಯರಿಗೆ ಕಲಿಸಿದ ಹಾಗೆ ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು ಎಂದು ಕೇಳಿದನು’ ” (ಲೂಕ 11:1).*

“ನಮಗೂ ಪ್ರಾರ್ಥಿಸುವದನ್ನು ಕಲಿಸು” ... “*ನನಗೂ* ಪ್ರಾರ್ಥಿಸುವದನ್ನು ಕಲಿಸು.” ಪರಿಚಿತವಾದ ಪರಿಶುದ್ಧ ಬರಹವು ಹೆಚ್ಚು ನಿಕಟವಾಗಿ ಓದಲ್ಪಡುವ ಅಗತ್ಯತೆಯಿದೆ; ಅಪರಿಚಿತ ಪರಿಶುದ್ಧ ಬರಹವು ಓದಲ್ಪಡತಕ್ಕದ್ದು. ಯೇಸುವು ಅಧಿಕಾರವಿದ್ದವನಂತೆ ಬೋಧಿಸುವದನ್ನು ಶಿಷ್ಯರು ಕೇಳಿದರು; ಆತನು ಮಹಾ ಅದ್ಭುತಕಾರ್ಯಗಳನ್ನು ಮಾಡುವದನ್ನು ಅವರು ಗಮನಿಸಿದರು; ಆತನ ಬಲದಿಂದ ಅವರು ಭಯಭಕ್ತಿಯಿಂದ ತುಂಬಿಕೊಂಡರು ... ಆದಾಗ್ಯೂ ಅವರು ಒಂದೇ ಮನಸ್ಸಿನಿಂದ, “ನಮಗೂ ಪ್ರಾರ್ಥಿಸುವದನ್ನು ಕಲಿಸು” ಎಂದು ಬೇಡಿಕೊಂಡರು. ಪ್ರಾರ್ಥನೆಯು ಒಂದು ಸಹಜಗುಣವಾಗಿದೆ, ಯಾಕಂದರೆ ಧರ್ಮವು ಆಂತರ್ಯದಲ್ಲಿ ಪ್ರಾರ್ಥನೆಯಾಗಿದೆ. ಮನೆಗೆ ಹಿಂದಿರುಗುವ ಹಂಬಲವುಳ್ಳವರಾಗಿರುವೆವು; ಈ ರೋಗ ವನ್ನು ಪ್ರಾರ್ಥನೆಯು ಮಾತ್ರವೇ ಗುಣಪಡಿಸಬಲ್ಲದು. ಒಂದು ದೊಡ್ಡ ಅನುಭವಕ್ಕಾಗಿ ಪ್ರಾರ್ಥನೆಯು ಒಂದು ಸಣ್ಣ ಮಾತಾಗಿರುತ್ತದೆ. ನಮ್ಮ ವಚನದ ಭಾಗವು, ಲೂಕ 11:1-13, ಪ್ರಾರ್ಥನೆಯ ಮೇಲೆ ಜಗತ್ತಿನಲ್ಲಿ ಅತಿ ದೊಡ್ಡ ಒಂದೇಯಾದ ಪ್ರಕರಣ ವಾಗಿದೆ: ಪ್ರಾರ್ಥನೆಯ ಬಗ್ಗೆ ಯೇಸುವು ತನ್ನ ಶಿಷ್ಯರ ಪ್ರಾರ್ಥನೆಯನ್ನು ಕೇಳಿದನು! ಪ್ರಾರ್ಥನೆಯನ್ನು ಕುರಿತ ಪ್ರತಿಯೊಂದು ಪ್ರಮುಖ ತತ್ವವು ಈ ವಾಕ್ಯಭಾಗದಲ್ಲಿ ಬೋಧಿ ಸಲ್ಪಟ್ಟಿದೆ. ಒಬ್ಬರು ಹೀಗೆ ಹೇಳಿದ್ದಾರೆ,

> ಮೊದಲೆಂದೂ ಪ್ರಾರ್ಥಿಸದವನು
> ಈಗ ಪ್ರಾರ್ಥಿಸಲಿ,
> ಮತ್ತು ಮೊದಲು ಪ್ರಾರ್ಥಿಸಿದವನು
> ಹೆಚ್ಚೆಚ್ಚಾಗಿ ಪ್ರಾರ್ಥಿಸಲಿ.

“ಅತೀ ದೊಡ್ಡ ಸಂಶೋಧನೆಯು ಯಾವುದಾಗಿರುತ್ತದೆ?” ಎಂದು ಒಬ್ಬ ವಿಜ್ಞಾನಿಗೆ ಕೇಳಿದಾಗ, “ಪ್ರಾರ್ಥನೆಯ ಬಗ್ಗೆ ಕಂಡುಕೋ” ಎಂದು ಉತ್ತರಕೊಟ್ಟನು. ಪ್ರಸಂಗಗ ಳನ್ನು ಕೇಳುವುದಕ್ಕಾಗಿ ಸಭೆಯ ಸದಸ್ಯರು ಸಭೆಯ ಆರಾಧನೆಗಳಿಗೆ ಬರುತ್ತಾರೆ ಎಂದು ಪ್ರಸಂಗಿಗಳು ಸಾಮಾನ್ಯವಾಗಿ ಯೋಚಿಸುತ್ತಾರೆ. ಮೂಲವಾಗಿ ಅವರು ಹಾಗೆ ಮಾಡುವುದಿಲ್ಲ. ಹೇಗೆ ಪ್ರಾರ್ಥಿಸಬೇಕೆಂದು ಅವರು ಕಲಿಯಲು ಬರುತ್ತಾರೆ. ಪ್ರಾರ್ಥಿಸುವುದು ಆತ್ಮಿಕವಾಗಿ ಉಸಿರಾಡಿಸುವುದಾಗಿದೆ, ಪ್ರಾರ್ಥನೆಯು ಸ್ವಾಭಾವಿಕವಾದದ್ದು, ಆದರೆ ಅದು ಕಷ್ಟಕರವಾ

ದದ್ದಾಗಿರುತ್ತದೆ. "ನಾನು ಪ್ರಾರ್ಥನೆಯ ದೇವರಾಗಿರುತ್ತೇನೆ, ನನ್ನನ್ನು ಓದು." "ಧರ್ಮದಲ್ಲಿ ಅತೀ ಹೆಚ್ಚಾದದ್ದನ್ನು ಮಾಡಲು ನೀನು ಬಯಸುವುದು ಯಾವುದು?" ಎಂದು ನಿನಗೆ ಪ್ರಶ್ನಿಸಿದರೆ, ಸರ್ವಸಾಮಾನ್ಯವಾದ ಉತ್ತರವು "ಪ್ರಾರ್ಥಿಸುವುದು" ಎಂದಾಗಿರುತ್ತದೆ. "ಧರ್ಮದಲ್ಲಿ ನಮ್ಮ ಅತಿ ದೊಡ್ಡ ಸೋಲು ಯಾವುದು?" ನೀನು ಕೇಳಿದರೆ, "ಪ್ರಾರ್ಥನೆ" ಎಂಬುದು ಸರಳ ಉತ್ತರವಾಗಿದೆ.

ಸ್ನಾನಿಕನಾದ ಯೋಹಾನನ ಬಗ್ಗೆ ಅವನು ವಿಚಿತ್ರವಾದ "ನರಕದ - ಬೆಂಕಿ ಮತ್ತು ಗಂಧಕಗಳ" ಪ್ರಸಂಗಿ ಎಂದು ನಾವು ಸಾಮಾನ್ಯವಾಗಿ ಯೋಚಿಸುತ್ತೇವೆ. ಶಿಷ್ಯರು ಅವನನ್ನು ಪ್ರಾರ್ಥನೆಯ ಮನುಷ್ಯನಂತೆ, ಪ್ರಾರ್ಥನೆಯ ಬೋಧಕನಂತೆ ತಿಳಿದಿದ್ದರು. ಆಧುನಿಕ ಮನುಷ್ಯನು ವಿಮೋಚನಾ (ಸ್ವಾತಂತ್ರದ) ದೈವಜ್ಞಾನ ಶಾಸ್ತ್ರದಲ್ಲಿ ತೊಡಗಿಕೊಂಡಿರುವನು. ಐಗುಪ್ತದ ದಾಸತ್ವದಲ್ಲಿದ್ದ ಇಬ್ರಿಯರೂ ತಾವೂ ಹಾಗೆಯೇ ಇದ್ದೆವೆಂದು ಯೋಚಿಸಿದರು! "ನಮ್ಮನ್ನು ವಿಮೋಚಿಸು!" ಎಂದು ಅವರು ಕೂಗಿದರು. ದೇವರು ವಿಮೋಚಿಸಿದನು. ಅವರು ಹೊರಡೋಣದಲ್ಲಿದ್ದರು. ಅವರು ಸ್ವತಂತ್ರರಾಗಿದ್ದರು! ಆದಾಗ್ಯೂ ಬಾಯಾರಿಕೆಯಲ್ಲಿ ಇದ್ದರು! ಸ್ವಾತಂತ್ರ್ಯ ಮಾತ್ರವೇ ಇರುವ ಮನುಷ್ಯನು ವಿಕಾರವಾದ ವ್ಯಕ್ತಿಯಾಗಿದ್ದಾನೆ. ಮನುಷ್ಯನು ಬಾಯಾರಿಕೆಯುಳ್ಳವನಾಗಿದ್ದಾನೆ. "ನಿನ್ನಲ್ಲಿ ವಿಶ್ರಾಂತಿಯನ್ನು ಹೊಂದುವವರೆಗೆ ನಮ್ಮ ಪ್ರಾಣಗಳಿಗೆ ವಿಶ್ರಾಂತಿಯಿರುವುದಿಲ್ಲ" ಎಂದು ಶತಮಾನಗಳ ಮೊದಲು ಔಗುಸ್ತೀನನು ಗಮನಿಸಿದ್ದಾನೆ.[1] ದೇವರಿಗಾಗಿ ಮಾನವ ಕುಲವು - ದಾಹದಿಂದ ಇದೆ! ಪ್ರಾರ್ಥನೆಯು ದೇವರಿಗೆ ಸಂಬಂಧಿಸುವ ಮೂಲ ಮಾರ್ಗವಾಗಿದೆ. ಅಪೊಸ್ತಲರು ಅದ್ಭುತ ಕಾರ್ಯಗಳನ್ನು ಮಾಡಬಲ್ಲವರಾಗಿದ್ದರು. ಇದು ಉದ್ವೇಗಗೊಳಿಸುವಂಥದ್ದು ಆಗಿತ್ತು! ಅಂತರಾಳದಲ್ಲಿ, ಅವರು ಸುಮ್ಮನೇ ಪ್ರಾರ್ಥಿಸಲು ಬಯಸಿದ್ದರು. ಧರ್ಮದಲ್ಲಿ ಯಾವುದೂ ಪ್ರಾರ್ಥನೆಯ ಸ್ಥಾನವನ್ನು ತೆಗೆದುಕೊಳ್ಳುವದಿಲ್ಲ. ಧರ್ಮದ ಹೋರಾಟವು, ಅಕ್ಷರಶಃವಾಗಿ, ಪ್ರಾರ್ಥನೆಯ ಮೇಲಿನ ಹೋರಾಟವಾಗಿದೆ. "ಪ್ರಾರ್ಥಿಸುವದನ್ನು ಕಲಿಸು; ನನ್ನಲ್ಲಿ ನಿನ್ನನ್ನು ಪ್ರಾರ್ಥಿಸು."

## ಪ್ರಾರ್ಥನೆಯು ನಂಬಿಕೆಯಾಗಿದೆ

ಪ್ರಾರ್ಥನೆಯು ನಿರ್ಣಾಯಕವಾದದ್ದಾಗಿದೆ, ಯಾಕಂದರೆ ಪ್ರಾರ್ಥನೆಯು ದೇವರೊಂದಿಗೆ ನಮ್ಮ ಸಂಬಂಧವನ್ನು, ನಮ್ಮ ನಿಜವಾದ ನಂಬಿಕೆಯನ್ನು, ನಮ್ಮ ಜೀವಿತಗಳನ್ನೇ ಪ್ರದರ್ಶಿಸುತ್ತದೆ. ಆದುದರಿಂದಲೇ ಪ್ರಾರ್ಥನೆಯ ಬಗ್ಗೆ ಯೋಚಿಸುವಂಥದ್ದು ಬಹಳವಾಗಿ ಭಯಪಡಿಸುತ್ತದೆ! ಪ್ರಾರ್ಥನೆಯನ್ನು ಮಂತ್ರವಿದ್ಯೆಗೆ ಇಳಿಸುವುದು ದೇವರೊಂದಿಗಿನ ನಮ್ಮ ಸಂಬಂಧವನ್ನು ವಿಗ್ರಹಾರಾಧನೆಯಂತೆ ಬಹಿರಂಗಪಡಿಸುತ್ತದೆ. "ಹೆಸರು ಹೇಳಿರಿ ಮತ್ತು ಅದನ್ನು ಕೇಳಿರಿ; ಪ್ರಕಟಮಾಡಿರಿ ಮತ್ತು ಅದನ್ನು ಸೆಳೆದುಕೊಳ್ಳಿರಿ." ಇದು ನಮ್ಮ ಆಶೆಯನ್ನೂ ದೇವರನ್ನೂ ನಾವು ದುರುಪಯೋಗ ಪಡಿಸಿಕೊಳ್ಳುವದನ್ನೂ ಬಹಿರಂಗ ಪಡಿಸುತ್ತದೆ. *ಪ್ರಾರ್ಥನೆಯು ಭಯಪಡಿಸುತ್ತದೆ!* ಅಲ್ಪವಾಗಿ ಪ್ರಾರ್ಥಿಸಿದರೆ ಇಲ್ಲವೇ ಏನನ್ನೂ ಪ್ರಾರ್ಥಿಸದೇ ಇದ್ದರೆ, ನಾವು ದೇವರನ್ನು ನಂಬುವವರು ಆಗಿರುವುದೇ ಇಲ್ಲ. ಪ್ರಾರ್ಥನೆಯಲ್ಲಿ ನಮಗೆ ನಿರಾಶೆಯಾಗಿದ್ದರೆ, ನಾವು ನಮಗೆ ನಮ್ಮ ಸ್ವಂತ ದೇವರುಗಳನ್ನು ಮಾಡಿಕೊಳ್ಳುತ್ತೇವೆ, ದೇವರು ನಮಗೆ ಉತ್ತರಕೊಡುತ್ತಾನೆಂಬಂತೆ ತಿಳಿಯುತ್ತೇವೆ. ನಾವು ಒಂದು ನಿರಾಶೆಯನ್ನು ಆರಾಧಿಸಲಾರೆವು ಎಂಬುದು ಸ್ಪಷ್ಟವಾಗಿದೆ. ದೇವರು ದೇವರೇ ಆಗಿದ್ದ ಕಾರಣದಿಂದ, ಆತನನ್ನು ನಂಬಬಹುದು. ತಾವು ಸ್ವಾರ್ಥಕ್ಕಾಗಿ ಬಯಸಿದ್ದನ್ನು ಹೊಂದಿಕೊಳ್ಳುವದಕ್ಕಾಗಿ "ಪ್ರಾರ್ಥಿಸುವದನ್ನು ನಮಗೆ ಕಲಿಸು" ಎಂದು ಶಿಷ್ಯರು ಕೇಳಲಿಲ್ಲ. ಯೇಸುವು "ದೇವರೊಂದಿಗೆ ಸರಿಯಾಗಿ ಇದ್ದಾನೆ" ಎಂದು ಅವರು ತಿಳಿದಿದ್ದರು.

ಯೇಸುವಿಗೆ ಪರಲೋಕದ ತಂದೆಯೊಂದಿಗೆ ನಿಕಟ ಸಂಬಂಧವಿದೆಯೆಂದು ಅವರು ತಿಳಿದಿದ್ದರು. ಆತನಲ್ಲಿ ಇದ್ದದ್ದಕ್ಕಾಗಿ ಅವರು ಬಾಯಾರಿಕೆಯುಳ್ಳವರಾಗಿದ್ದರು! ಅವರು ಒಂದು ಕಲೆಯನ್ನಾಗಲೀ ಇಲ್ಲವೇ ಸೂತ್ರವನ್ನಾಗಲೀ ನೋಡಲಿಲ್ಲ; ಅವರು ಅಲಂಕಾರಿಕ ಪದಗಳೊಂದಿಗೆ ಪ್ರಭಾವಿತರಾಗಲಿಲ್ಲ. ಅವರು ಅದನ್ನು ನೋಡಿ ದಾಗ ಅವರು ನಿಜ ವಾದ ಪ್ರಾರ್ಥನೆಯನ್ನು ಗುರುತಿಸಿದರು! ಅದು "ಚಿತ್ರಿಸಿದ ಗಾಜಿನ ನೋಟ" ವಾಗಿರಲಿಲ್ಲ ಇಲ್ಲವೇ "ಪರಿಶುದ್ಧತೆಗೆ ಅನುಗುಣವಾಗಿರಲಿಲ್ಲ." ಪ್ರಾರ್ಥನೆಯು ಮನುಷ್ಯನು ಸರ್ವಶಕ್ತ ದೇವರ ಸನ್ನಿಧಿಯೊಳಗೆ ದೀನತೆಯಿಂದ ಬಿಡಲ್ಪಡುವುದಾಗಿರುತ್ತದೆ! ಪ್ರಾರ್ಥನೆಯು ದೇವರೊಂದಿಗೆ ಮಾತಾಡುವುದಕ್ಕಿಂತ ಹೆಚ್ಚಿನದಾಗಿದೆ. ಪ್ರಾರ್ಥನೆಯು ದೇವರನ್ನು ಆಲಿಸುವುದಕ್ಕಿಂತ ಹೆಚ್ಚಿನದಾಗಿದೆ. ಪ್ರಾರ್ಥನೆಯು *ದೇವರೊಂದಿಗೆ* ಇರುವುದಾಗಿದೆ.

"*ಹೇಗೆ* ಪ್ರಾರ್ಥಿಸಬೇಕು ಎಂಬುದನ್ನು ಕಲಿಸು" ಎಂದಲ್ಲ ಆದರೆ "ನಮಗೂ ಪ್ರಾರ್ಥಿಸುವದನ್ನು ಕಲಿಸು" ಎಂದು ಶಿಷ್ಯರು ಕೇಳಿಕೊಂಡರು. ಇಲ್ಲಿ ವಿಚಾರಪೂರ್ವಕ ಭಿನ್ನತೆ ಇರುತ್ತದೆ. ನಾವು ಪ್ರಾರ್ಥನೆಯಬಗ್ಗೆ ಮಾತಾಡುತ್ತೇವೆ; ಪ್ರಾರ್ಥನೆಯ ಬಗ್ಗೆ ಮಿಲಿಯಗಟ್ಟಲೆ ಪುಸ್ತಕಗಳೂ ಧ್ವನಿಸುರುಳಿಗಳೂ ಇರುತ್ತವೆ; ಪ್ರಾರ್ಥನೆಯ ಮೇಲೆ ನಾವು ಶೀಟ್ರೀಟಿಗೆ ಹೋಗುತ್ತೇವೆ. ಇವು ನಮ್ಮನ್ನು ನಿರಾಶರನ್ನಾಗಿ ಮಾಡಿವೆ. ಯಾಕೆ? ಯಾಕಂದರೆ ಅವು ಸೂತ್ರಗಳಿಗೆ, ತಂತ್ರಗಳಿಗೆ ಹಿಂದಿರುಗಿ ಹೋಗುತ್ತೇವೆ. ನೀವು ಪ್ರಾರ್ಥಿಸುವದರಿಂದ ಮಾತ್ರವೇ ಪ್ರಾರ್ಥಿಸುವದನ್ನು ಕಲಿಯಬಹುದು! ಒಬ್ಬನು ಪ್ರಾರ್ಥಿಸಬೇಕೆಂದು ಭಾವಿಸುವನೋ ಆಗ ಮಾತ್ರವೇ ಪ್ರಾರ್ಥಿಸುವವನು ಹೆಚ್ಚು ಪ್ರಾರ್ಥಿಸುವದಿಲ್ಲ. "ನೀನು ಪ್ರಾರ್ಥಿಸಿದ ನಂತರ ಪ್ರಾರ್ಥಿಸುವದಕ್ಕಿಂತ ಹೆಚ್ಚಾದದ್ದನ್ನು ಮಾಡಬಹುದು, ಆದರೆ ನೀನು ಪ್ರಾರ್ಥಿಸುವ ವರೆಗೆ ಪ್ರಾರ್ಥಿಸುವುದಕ್ಕಿಂತ ಹೆಚ್ಚಾದದ್ದನ್ನು ನೀನು ಮಾಡಲಾರಿ" ಎಂಬುದು ನಿಜವಾದದ್ದಾಗಿದೆ. *ಮೊದಲು ಪ್ರಾರ್ಥಿಸು!* ಜೀವಿಸುವದಕ್ಕಾಗಿ ನಾವು ಪ್ರಾರ್ಥಿಸುತ್ತೇವೆ! ಪ್ರಾರ್ಥನೆಯು ಜೀವವಾಗಿದೆ! ಧರ್ಮದ ಹೃದಯವು ಪ್ರಾರ್ಥನೆಯಾಗಿದೆ. "ಕರ್ತನೇ, ನಂಬುತ್ತೇನೆ; ನನಗೆ ನಂಬಿಕೆ ಕಡಿಮೆಯಾಗಿದ್ದರೆ ನನಗೆ ಸಹಾಯಮಾಡು" ಎಂಬುದು ಪ್ರಾರ್ಥನೆಯು ಸಂಕ್ಷೇಪಿಸುವಿಕೆಯಾಗಿದೆ (ಮಾರ್ಕ 9:24). "... ದೇವರೇ, ಪಾಪಿಯಾದ ನನ್ನನ್ನು ಕರುಣಿಸು" ಎಂಬುದು ಪ್ರಾರ್ಥನೆಯಾಗಿದೆ (ಲೂಕ 18:13). ಪ್ರಾರ್ಥನೆಯು ಅರಿಕೆಯಾಗಿದೆ. ಪ್ರಾರ್ಥನೆಯ ಅಧೀನತೆಯಾಗಿದೆ. ಪ್ರಾರ್ಥನೆಯು ಸಹಾಯ ಹೀನತೆಯಾಗಿದೆ. ಪ್ರಾರ್ಥನೆಯು ದೇವರ ಕಡೆಗೆ ನೋಡುವುದಾಗಿದೆ. ಪ್ರಾರ್ಥನೆಯು ವಿಧೇಯತೆಯಾಗಿದೆ. ಪ್ರಾರ್ಥನೆಯು ದೇವರೊಂದಿಗೆ ಜೀವಿಸುವುದಾಗಿದೆ.

ಯಾವುದೇ ಸೋಲು ಪ್ರಾರ್ಥನೆಯ ಸೋಲಾಗಿರುತ್ತದೆ. ಯಾವುದೇ ಪಾಪವು ಪ್ರಾರ್ಥನೆಯ ಸೋಲಾಗಿರುತ್ತದೆ. ಪ್ರಾರ್ಥಿಸುವುದಕ್ಕಿಂತ ಪ್ರಾರ್ಥನೆಯ ಬಗ್ಗೆ ಬರೆಯುವುದು ಸುಲಭವಾಗಿದೆ; ನೀನು ಪ್ರಾರ್ಥನೆಯ ಬಗ್ಗೆ ಅನೇಕ ಸಂಗತಿಗ ಳನ್ನು ತಿಳಿಯಬಹುದು ಆದರೆ ಪ್ರಾರ್ಥಿಸುತ್ತಿರುವದಿಲ್ಲ. ನಾವು ನಮ್ಮನ್ನು ಪ್ರಾರ್ಥನೆಗೆ ಸಮರ್ಪಿಸಿಕೊಳ್ಳಬೇಕು. ಈ ಅರ್ಥದಲ್ಲಿ ಪ್ರಾರ್ಥನೆಯ ನಿಯಮವು ನಂಬಿಕೆಯ ನಿಯಮವನ್ನು ದಾಟಿ ಹೋಗುತ್ತದೆ.

ದೇವರಿಗಾಗಿ ಮತ್ತು ಮನುಷ್ಯನಿಗಾಗಿ ಯಾವನಾದರೂ ಮಾಡುವ ಅತೀ ದೊಡ್ಡ ಸಂಗತಿಯು ಪ್ರಾರ್ಥಿಸುವುದು.

ಇದು ಕೇವಲ ಒಂದೇ ಸಂಗತಿಯಾಗಿರುವುದಿಲ್ಲ, ಆದರೆ ಇದು ಮುಖ್ಯವಾದ ಸಂಗತಿಯಾಗಿದೆ.

ಭೂಲೋಕದ ದೊಡ್ಡ ಜನರು ಪ್ರಾರ್ಥಿಸುವ ಜನರಾಗಿದ್ದಾರೆ.

ಪ್ರಾರ್ಥನೆಯ ಬಗ್ಗೆ ಮಾತಾಡುವವರು ಎಂಬುದು ನನ್ನ ಅರ್ಥವಲ್ಲ;
ಪ್ರಾರ್ಥನೆಯಲ್ಲಿ ತಾವು ನಂಬುತ್ತೇವೆಂದು ಹೇಳುವವರೂ ಅಲ್ಲ;
ಪ್ರಾರ್ಥನೆಯ ಬಗ್ಗೆ ವಿವರಿಸಬಲ್ಲವರೂ ಅಲ್ಲ;
ಆದರೆ ಪ್ರಾರ್ಥಿಸಲು ಸಮಯ ತೆಗೆದುಕೊಳ್ಳುವವರು ಎಂಬುದು ನನ್ನ ಅರ್ಥ.

ಎಸ್. ಡಿ. ಗೋರ್ಡನ್

## ಪ್ರಾರ್ಥನೆಯು ಬಲವಾಗಿದೆ

ಯೇಸುವು ಪ್ರಾರ್ಥಿಸುವುದನ್ನು ಕೇಳುವ ಅವಕಾಶವನ್ನು ಶಿಷ್ಯರು ಹೊಂದಿದ್ದರು! ಎಂಥ ಭಯಭಕ್ತಿಯ ಅವಕಾಶ! ಮೂರು ವರುಷಗಳಿಗಿಂತ ಹೆಚ್ಚುಕಾಲ ಅವರು ಯೇಸುವನ್ನು ಅನೇಕ ಸ್ಥಳಗಳಲ್ಲಿ ನೋಡಿದ್ದರು. ಆತನು ಬೋಧಿಸಿದ್ದನ್ನು ಅವರು ಕೇಳಿದ್ದರು, ಆತನು ರೋಗಿಗಳನ್ನು ಗುಣಪಡಿಸುವದನ್ನು ನೋಡಿದ್ದರು, ಆತನು ಮಕ್ಕಳನ್ನು ಆಶೀರ್ವದಿಸಿದ್ದನ್ನು ನೋಡಿದ್ದರು. ಅವರು ನೋಡಿದ್ದರಲ್ಲಿ ಯಾವುದೂ ಆತನ ಪ್ರಾರ್ಥನಾ ಜೀವಿತಕ್ಕೆ ಸಮನಾದದ್ದು ಇರಲಿಲ್ಲ! ಯೇಸುವಿನ ಮಹಿಮೆಯು ಪ್ರಾರ್ಥನೆಯಾಗಿತ್ತು! ಪ್ರಾರ್ಥನೆಯು ಒಂದು "ಕ್ರಮಕ್ಕಿಂತ" ಹೆಚ್ಚಾಗಿತ್ತು; ಅದು ಒಂದು "ಬಲ" ಆಗಿರುತ್ತದೆ.

"ಚಿಕ್ಕ ಪ್ರಾರ್ಥನೆಗಳನ್ನು ಹೇಳಬೇಕು" ಎಂದು ಯೇಸುವು ತನ್ನ ಶಿಷ್ಯರಿಗೆ ಬೋಧಿಸಲಿಲ್ಲ. ಒಂದು ಪ್ರಾರ್ಥನೆಯನ್ನು ಹೇಳುವುದು ಮತ್ತು ಪ್ರಾರ್ಥಿಸುವುದು ಎರಡು ಭಿನ್ನವಾದ ಸಂಗತಿಗಳಾಗಿರುತ್ತವೆ. ಯೇಸುವು ಪ್ರಾರ್ಥಿಸಿದನು. ಪ್ರಾರ್ಥಿಸಲಿಕ್ಕೆ ತನ್ನ ಶಿಷ್ಯರಿಗೆ ಆತನು ಕಲಿಸಿದನು. ಯೇಸುವು ಅವರೊಂದಿಗೆ ಹಾಜರಿದ್ದರೂ ಅವರು ಪ್ರಾರ್ಥನೆಗಾಗಿ ತಮ್ಮ ಅತ್ಯಂತ ಅಗತ್ಯತೆಯನ್ನು ನೋಡಿದರು. ಯೇಸುವಿಗೆ ಪ್ರಾರ್ಥನೆಯ ಅಗತ್ಯತೆ ಇದ್ದರೆ, ನಮಗೆ ಇನ್ನೂ ಎಷ್ಟು ಹೆಚ್ಚು ಅಗತ್ಯತೆ ಇರಬಹುದು? ಪ್ರಾರ್ಥನೆಯು ಯೇಸುವಿನೊಂದಿಗೆ ಕೇಂದ್ರವಾಗಿದ್ದರೆ, ಅದು ನಮ್ಮೊಂದಿಗೂ ಹಾಗೆಯೇ ಇರುವುದು.

ಆದುದರಿಂದ, ಸಭೆಯ ಕೆಲಸವು ಪ್ರಾರ್ಥನೆಯಾಗಿದೆ. ದೇವಾಲಯದಲ್ಲಿ ಪ್ರಾರ್ಥನೆಯನ್ನು "ಆಮಂತ್ರಿಸುವದಕ್ಕೆ ಮತ್ತು ಆಶೀರ್ವಚನಗಳಿಗೆ" ಇಳಿಸಬಾರದು. ನಮ್ಮ ಬಹಿರಂಗ ಪ್ರಾರ್ಥನೆಗಳು ದೇವರಿಗೆ ಇರತಕ್ಕದ್ದು ಆದರೆ ಮನುಷ್ಯನಿಗಲ್ಲ. ಅನೇಕ ಪ್ರಾರ್ಥನೆಗಳು ಬರೀ "ಮಾತುಗಳೇ" ಆಗಿರುತ್ತವೆ. ಪುನಃ ಪುನಃ ಹೇಳುವಂಥದ್ದನ್ನು ಬಿಟ್ಟುಬಿಡಬೇಕು. ನಾವು "ದೇವರ ಹೃದಯಕ್ಕೆ" ಪ್ರಾರ್ಥಿಸುತ್ತೇವೆಯೋ ಇಲ್ಲವೇ "ಮನುಷ್ಯನ ಕಿವಿಗಳಿಗೆ" ಪ್ರಾರ್ಥಿಸುತ್ತೇವೆಯೋ? ನಮ್ಮ ಸ್ವಂತ ಪ್ರಾರ್ಥನೆಗಳನ್ನು ಗಂಭೀರವಾಗಿ ಕೇಳಿಸಿಕೊಳ್ಳುತ್ತೇವೆಯೋ? ನಿರೀಕ್ಷಿಸಲ್ಪಟ್ಟದ್ದನ್ನು ಇಲ್ಲವೇ ಅಗತ್ಯವಾದದ್ದನ್ನು ನಾವು ಪ್ರಾರ್ಥಿಸುತ್ತೇವೆಯೋ? ಅದು ಒಳ್ಳೆಯದಾಗಿ ಕೇಳಿಸಿದರೆ, ಅದು ಮಾತುಗಳೇ ಆಗಿರುತ್ತದೆ! ನಾವು ನಿಜವಾಗಿಯೂ ಪ್ರಾರ್ಥಿಸುತ್ತೇವೆಯೋ? *ಎಂದಾದರೂ ನಾವು ನಿಜವಾಗಿಯೂ ಪ್ರಾರ್ಥಿಸಿರುವೆವೋ?* ಆದಿ ಸಭೆಯು ಪ್ರಾರ್ಥಿಸಿದಾಗ ಮನೆಯು ನಡುಗಿತು (ಅಪೊಸ್ತಲರ ಕೃತ್ಯಗಳು 4:31). ಯೇಸುವಿನಲ್ಲಿ ಏನೋ ಇದೆಯೆಂದು ಶಿಷ್ಯರು ನಂಬಿದ್ದರು. ಆತನಿಗಿದ್ದುದನ್ನು ಅವರು ಬಯಸಿದ್ದರು! ಸಹೋದರರು ಪ್ರಾರ್ಥಿಸಿದರೆ ಇಂದು ಏನು ಸಂಭವಿಸುವುದು? ಪ್ರಾರ್ಥನೆಯು ಬೈಬಲಿನಲ್ಲಿ ಅತೀ ಹೆಚ್ಚು ಸಾಮಾನ್ಯವಾಗಿ ನಮೂದಿಸಿದ ಆಜ್ಞೆಯಾಗಿದೆ, ಆದಾಗ್ಯೂ ಅತೀ ಕಡಿಮೆಯಾಗಿ ಅನುಸರಿಸಲ್ಪಟ್ಟಿದೆ. ಸಭೆಯು ಪ್ರಾರ್ಥನೆಯಲ್ಲಿ ಸೋತುಹೋಗುವದರಿಂದ ಸೋತು ಹೋಗುತ್ತದೆ. ಪ್ರಾರ್ಥನೆಯು ನಮ್ಮ ನಿಜವಾದ ಆಳವನ್ನು ಪ್ರಕಟಿಸುತ್ತದೆ; ಆದುದರಿಂದ, ಆದಾಮನಂತೆ, ನಾವು "ಮರಗಳ ಹಿಂದೆ ಅಡಗಿಕೊಳ್ಳಲು" ಬಯಸುತ್ತೇವೆ. ನಮ್ಮ ಕೆಲಸವು ನಮ್ಮ ಗರ್ವದ

ವ್ಯಕ್ತಪಡಿಸುವಿಕೆ ಆಗುವುದನ್ನು ಪ್ರಾರ್ಥನೆಯು ತಡೆಗಟ್ಟುತ್ತದೆ ಪ್ರಾರ್ಥನೆಯು ಕ್ರೈಸ್ತನು ಮಾಡುವ ಅತಿ ದೊಡ್ಡ ಕಾರ್ಯಾಚರಣೆಯ ಸಂಗತಿಯಾಗಿರುತ್ತದೆ. ನೀನು ಬಹಳ ಉದ್ದವಾಗಿ ಪ್ರಾರ್ಥಿಸಬಹುದು, ಆದರೆ ನೀನು ಬಹಳವಾಗಿ ಎಂದೂ ಪ್ರಾರ್ಥಿಸಲಾರಿ. ಪ್ರಾರ್ಥನೆಯನ್ನು ಬಿಟ್ಟು ನಾವು ಏನನ್ನೂ ಮಾಡಬಾರದು!

## ಪ್ರಾರ್ಥನೆಯು ಕ್ರಮವಾಗಿದೆ

"ನಮಗೆ ಪ್ರಾರ್ಥಿಸುವದನ್ನು ಕಲಿಸು" ಎಂದು ಶಿಷ್ಯರು ಕೇಳಿದ್ದರೂ "ಹೇಗೆ" ಎಂಬುದು ಒಳಗೊಂಡಿರುತ್ತದೆ. ಇಂದು ಜನರು ಸತ್ಯದಲ್ಲಿ, ಬೋಧನೆಯಲ್ಲಿ ಇಲ್ಲವೇ ಕ್ರಮದಲ್ಲಿ ಬಹಳ ಆಸಕ್ತರಾಗಿರುವದಿಲ್ಲ. ಯೇಸುವು ಒಂದು ಮಾದರಿಯೊಂದಿಗೆ, ಮುಖ್ಯಾಂಶಗಳೊಂದಿಗೆ ಇಲ್ಲವೇ ಕ್ರಮದೊಂದಿಗೆ ಪ್ರಾರಂಭಿಸಿದನು. ಜೀವನದಲ್ಲಿ ಯಾವುದೇ ಸಂಗತಿಯು ಮೂಲಗಳೊಂದಿಗೆ ಪ್ರಾರಂಭಿಸಲ್ಪಡತಕ್ಕದ್ದು. ಫುಟ್‌ಬಾಲಿನ "ಯುಕ್ತಿ - ಆಟಗಳಲ್ಲಿ" ನಾವು ಸೋಲುವದಿಲ್ಲ - ಮೂಲ ತಡೆಗಟ್ಟುವದರಲ್ಲಿ, ಕೈಕೊಳ್ಳುವದರಲ್ಲಿ ಸೋಲುತ್ತೇವೆ. ಒಬ್ಬನು ಸುಧಾರಿಸುವ ಮೊದಲು ಸಂಗೀತದ ಸ್ವರಮಂಡಲದಲ್ಲಿ ಪರಿಣಿತನಾಗಬೇಕು. ಯುವಕರು ನಿಯಮಗಳನ್ನು ಕಲಿತುಕೊಳ್ಳತಕ್ಕದ್ದು; ಜ್ಞಾನದಲ್ಲಿ ಹಿರಿಯರಾದವರು ಮಾತ್ರವೇ ವ್ಯತ್ಯಾಸಗಳನ್ನು ಕಂಡುಹಿಡಿಯುವರು. ಪ್ರಾರ್ಥನೆಯು "ಕ್ರಮದಲ್ಲಿ ಬಲವಾಗಿದೆ."

ಯೇಸುವು ನಮ್ಮ ಗಮನವನ್ನು ಸೆಳೆಯುತ್ತಾನೆ. ಕೆಲವೇ ಪದಗಳಲ್ಲಿ ಆತನು ಪೂರ್ಣ ವ್ಯಾಪ್ತಿಯನ್ನು ಒಳಪಡಿಸಿದನು. ಅನಂತರದ ಪಾಠವು ಆತನ "ಮಾದರಿ ಪ್ರಾರ್ಥನೆಗೆ" ಸಮರ್ಪಿಸಲ್ಪಟ್ಟಿರುವುದು. ಅದು "ಕರ್ತನ ಪ್ರಾರ್ಥನೆ" ಎಂದು ಕರೆಯಲ್ಪಟ್ಟಿದೆ ಯಾಕಂದರೆ ಯೇಸು ಅದರ ಕರ್ತೃವು ಆಗಿದ್ದಾನೆ. ಅದು ಬೈಬಲಿಗೆ ಅನುಗುಣವಾಗಿದೆ. ಯಾಕಂದರೆ ಅದು ಬೈಬಲಿನಲ್ಲಿ ಇರುತ್ತದೆ. ಅದನ್ನು ಕಂಠಪಾಠ ಮಾಡಬಹುದು. ಅದು ಹೇಳಲ್ಪಡಬಹುದು. ಅದು ಪ್ರಾರ್ಥಿಸಲ್ಪಡಬಹುದು. ಅದು ಹಾಡಲ್ಪಡಬಹುದು. ಅದು ಅಧ್ಯಯನ ಮಾಡಲ್ಪಡಬಹುದು. ಇಲ್ಲಿಯೇ ನಾವೆಲ್ಲರೂ ಪ್ರಾರಂಭಿಸುತ್ತೇವೆ.

## ಪ್ರಾರ್ಥನೆಯು ಅವಿರತಯತ್ನವಾಗಿದೆ

ಪ್ರಾರ್ಥನೆಯಿಂದ ಯೇಸುವು ನಮ್ಮ "ಹುಚ್ಚುತನ"ವನ್ನು ಸ್ಫೋಟಗೊಳಿಸುತ್ತಾನೆ. ಆತನು ನಮಗೆ ಆಘಾತವನ್ನುಂಟು ಮಾಡುತ್ತಾನೆ! ಶಿಷ್ಯರ ಬೇಡಿಕೆಗೆ ಉತ್ತರ ಕೊಡುವಲ್ಲಿ, ಯೇಸುವು ಒಂದು ಸರಳ ಕ್ರಮವನ್ನು ಕೊಟ್ಟನು! ಇದು ನಿರಾಶೆಪಡಿಸುವಂಥದ್ದಾಗಿರಬೇಕು. ರಹಸ್ಯವಾದ ಪದವು ಕೊಡಲ್ಪಡಲಿಲ್ಲ! ಭಾವಾತ್ಮಕ ಬಾಲಿಶತನವು ಇಲ್ಲಿ ಉಪಯೋಗಿಸಲ್ಪಡಲಿಲ್ಲ. ಕ್ರಮದೊಂದಿಗೆ ಪ್ರಾರಂಭಿಸಿರಿ ಅನಂತರ ಪಟ್ಟು ಹಿಡಿಯಿರಿ. ನೀವು ಗಂಭೀರವಾಗಿ ಒಳಗೊಳ್ಳದಿದ್ದರೆ, ದೇವರು ಯಾಕೆ ಒಳಗೊಂಡವನಾಗಿರ ಬೇಕು? ದೇವರು ಒಳಗೊಳ್ಳ ಬೇಕೋ? ಪ್ರಾರ್ಥನೆಯಲ್ಲಿ ನೀವು ಹೋರಾಡಲು ಸಿದ್ಧರಾಗಿರದಿದ್ದರೆ, ದೇವರು ಯಾಕೆ ಕೇಳಬೇಕು? ಪ್ರಾರ್ಥಿಸುವುದು ಯೋಚಿಸುವುದಾಗಿದೆ. ಪ್ರಾರ್ಥಿಸುವುದು ಒಪ್ಪಿಕೊಳ್ಳುವುದಾಗಿದೆ. ಪ್ರಾರ್ಥಿಸುವುದು ಬೇಡಿಕೊಳ್ಳುವುದು, ಹುಡುಕುವುದು, ತಟ್ಟುವುದು ಆಗಿದೆ. ಕೇಳುತ್ತಲೇ, ಹುಡುಕುತ್ತಲೇ ತಟ್ಟುತ್ತಲೇ ಇರ್ರಿ. ದೇವರು ಬಾಟಲಿಯಲ್ಲಿಯ ದ್ರವವಾ ಗಿರುವದಿಲ್ಲ. ಪ್ರಾರ್ಥನೆಯು ಕಾರ್ಯವಾಗಿದೆ. ಪ್ರಾರ್ಥನೆಯು ಕಠಿಣವಾದದ್ದಾಗಿದೆ. ಪ್ರಾರ್ಥನೆಯು ಸಮಯ ತೆಗೆದುಕೊಳ್ಳುತ್ತದೆ. ಪ್ರಾರ್ಥನೆಯು ನಮ್ಮ ತುಟಿಗಳನ್ನಷ್ಟೇ ಅಲ್ಲ, ನಮ್ಮ ಜೀವಿತಗಳನ್ನೂ ಕೇಳುತ್ತದೆ. ಸ್ವಲ್ಪ

ಜನ ಪ್ರಾರ್ಥಿಸುತ್ತಾರೆ. ಕೆಲವರು ಮಾತ್ರ ಶ್ರಮೆ ಪಡುತ್ತಾರೆ. ಒಬ್ಬನು "ತನ್ನ ಬೆರಳುಗಳನ್ನು" ದೇವರ ಕಡೆಗೆ ತೋರಿಸಲಾರನು. ಪ್ರಾರ್ಥನೆಯು ಒಂದು ಒತ್ತಾಯಪೂರ್ವಕ ಬೇಡಿಕೆಯಾಗಿರುವುದಿಲ್ಲ.

ಯೇಸುವು ದೇವರನ್ನು ಮಾತ್ರವೇ ತಿಳಿದಿರುವುದಿಲ್ಲ, ಆದರೆ ಆತನು ನಮ್ಮನ್ನೂ ತಿಳಿದಿರುತ್ತಾನೆ. ಲೂಕ 11:5-8ರಲ್ಲಿ ಸತತ ಪ್ರಯತ್ನ ಮಾಡುವ ಇಬ್ಬರು ಸ್ನೇಹಿತರ ಸಾಮ್ಯವನ್ನು ಯೇಸು ಹೇಳಿದ್ದಾನೆ. ಕೊರತೆಯ ಸಮಯದಲ್ಲಿ ನಾವು ಸ್ನೇಹಿತರನ್ನು ಕರೆಯುತ್ತೇವೆ. ನಮ್ಮ ಅತ್ಯುತ್ತಮ ಸ್ನೇಹಿತರಿಗಾಗಿಯೂ ಸಹ ಬುದ್ಧಿವಂತಿಕೆಯಿಂದ ನಮ್ಮ ಸ್ಥಳಗಳನ್ನೂ ಸಮಯಗಳನ್ನೂ ಆಯ್ದುಕೊಳ್ಳುತ್ತೇವೆ. ಮಧ್ಯರಾತ್ರಿಯು ಸಾಮಾನ್ಯವಾಗಿ ಯೋಗ್ಯವಾದ ಸಮಯವಾಗಿರುವದಿಲ್ಲ! ಬೇರೊಬ್ಬರನ್ನು ಎಬ್ಬಿಸುವುದು ನಮ್ರತೆಯಾಗಿರುವದಿಲ್ಲ. ನಾಳೆ ಯಾವಾಗಲೂ ಕಾರ್ಯತುಂಬಿದ ತಾಸುಗಳು ಇರುತ್ತವೆ. ಪಟ್ಟು ಹಿಡಿದದ್ದಕ್ಕೆ ಉತ್ತರವಾಗಿ ಒಬ್ಬ ಸ್ನೇಹಿತನು ಮಧ್ಯರಾತ್ರಿಯನಂತರವೂ ನಿನ್ನ ಬೇಡಿಕೆಯನ್ನು ತೃಪ್ತಿಪಡಿಸಬಹುದು - ಅದು ಮನಸ್ಸಿಲ್ಲದ ಮನಸ್ಸಿನಿಂದಾಗಿರಬಹುದು. ಲೂಕ 11:5-8ರಲ್ಲಿಯ ಸಾಮ್ಯವು ದೇವರ ಒಲ್ಲದ ಮನಸ್ಸನ್ನು ಬೋಧಿಸುವುದಿಲ್ಲ; ಅದು ದೇವರ ಸಿದ್ಧಮನಸ್ಸನ್ನು ತೋರಿಸುತ್ತದೆ. ಪ್ರಾರ್ಥನೆಯು ಬಲವಾಗಿದೆ ಯಾಕಂದರೆ ದೇವರು ದೇವರಾಗಿದ್ದಾನೆ. ನಾನು ಪ್ರಾರ್ಥನೆಯಲ್ಲಿ ನಂಬಿಕೆಯಿಡುವದಿಲ್ಲ; ನಾನು ದೇವರಲ್ಲಿ ನಂಬಿಕೆಯಿಡುತ್ತೇನೆ. ದೇವರು ಲಭ್ಯವಿದ್ದಾನೆ. ಪ್ರಾರ್ಥಿಸುವುದನ್ನು ಹೊರತುಪಡಿಸಿ ಪ್ರಾರ್ಥನೆಗಾಗಿ ಅಂತಿಮ ವಾಗ್ದಾನವಿರುವದಿಲ್ಲ. ಪ್ರಾರ್ಥನೆಯು ಯಾವಾಗಲೂ ಸಂಪೂರ್ಣವಾಗಿ ಒಂದು ನೂತನ ಪರಿಸ್ಥಿಯನ್ನು ಸೃಷ್ಟಿಸುತ್ತದೆ. ಪ್ರಾರ್ಥನೆಯನಂತರ ಪ್ರತಿಯೊಂದೂ ಭಿನ್ನವಾಗಿರುತ್ತದೆ. ಕ್ರಮವನ್ನು ಕಲಿತುಕೊಳ್ಳಿರಿ ಆ ಮೇಲೆ ಸತತವಾಗಿ ಹೋರಾಡಿರಿ.

## ಪ್ರಾರ್ಥನೆಯು ಪಡೆದುಕೊಳ್ಳುವುದಾಗಿದೆ

"... ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕುರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು" (ಲೂಕ 11:9). ಬೈಬಲಿನಲ್ಲಿ 667 ನಿಶ್ಚಿತವಾದ ಬೇಡಿಕೆಗಳು 654 ಸ್ಪಷ್ಟವಾದ ಉತ್ತರಗಳೊಂದಿಗೆ ಕಂಡುಬರುವವು ಎಂದು ಒಬ್ಬರು ಗಮನಿಸಿದ್ದಾರೆ. ಇದು ದೊಡ್ಡ ಶತಭಾಗವಾಗಿದೆ. ಹದಿಮೂರು ಪ್ರಾರ್ಥನೆಗಳು ಉತ್ತರ ಪಡೆಯದೇ ಹೋದದವೆಂಬುದನ್ನು ಇದು ಸೂಚಿಸುವುದಿಲ್ಲ. ಪ್ರಾರ್ಥನೆಗೆ ಅಗತ್ಯವಾದ ಪ್ರತಿಯೊಂದೂ ಲೂಕ 11ರಲ್ಲಿ ಇರುತ್ತದೆ. *ಪ್ರಾರ್ಥಿಸು ... ಪ್ರಾರ್ಥಿಸು ... ಪ್ರಾರ್ಥಿಸು!* ಯಾವ ವಾಗ್ದಾನಗಳು! ದೇವರು ವಾಗ್ದಾನಗಳನ್ನು ಮಾಡುವ ಮತ್ತು ವಾಗ್ದಾನಗಳನ್ನು ಕೈಕೊಳ್ಳುವ ದೇವರಾಗಿದ್ದಾನೆ! "ನಂಬಿಗಸ್ತಿಕೆಯು ದೊಡ್ಡದಾಗಿದೆ!" "ಬೇಡಿಕೊಳ್ಳಿರಿ ... ಹುಡುಕಿರಿ ... ತಟ್ಟಿರಿ." ಪ್ರಾರ್ಥನೆಯಲ್ಲಿ ಪಟ್ಟುಹಿಡುಯುವಿಕೆಯು ಒದಗಿಸುತ್ತದೆ. ದಾವೀದನ ಕೀರ್ತನೆಗಳನ್ನು ಓದಿರಿ. ನಮ್ಮನ್ನು ತಿಳಿಯುವುದರಲ್ಲಿ ಯೇಸುವು ಪಿತೃಗಳನ್ನು ತಿಳಿದಿದ್ದನು. ನಾನು ಒಬ್ಬ ತಂದೆ; ನಾನು ಒಬ್ಬ ಅಜ್ಜ. ತಂದೆಗಳು ಪ್ರೀತಿಯಿಂದ ಒದಗಿಸುವರು. ಯೇಸುವು ಕ್ರಮದಿಂದ ಸ್ನೇಹಿತರಿಗೆ, ತಂದೆಗಳಿಗೆ ಹೋದನು. ಭೂಲೋಕದ ತಂದೆಗಳು ಒದಗಿಸುವುದರಿಂದ, ನಮ್ಮ ಪರಲೋಕದ ತಂದೆಯು ಇನ್ನೂ ಎಷ್ಟೋ ಹೆಚ್ಚಾಗಿ ಒದಗಿಸುವನಲ್ಲವೇ? ಪ್ರಾರ್ಥನೆಯು ಮೊದಲನೆಯ ಪದವಾಗಿದೆ. ಪ್ರಾರ್ಥನೆಯು ನಾವು ಪ್ರಾರಂಭಿಸುವಂಥದ್ದಾಗಿದೆ. ಪ್ರಾರ್ಥನೆಯು ಕೊನೆಯ ಪದವೂ ಆಗಿದೆ!

ಈ ಪ್ರಶ್ನೆಗಳನ್ನು ಯೋಚಿಸಿರಿ: (1) ಯೇಸುವು *ನಾಳೆ* ಹಿಂದಿರುಗಿ ಬರುತ್ತಾನೆಂದು

ನಾವು ತಿಳಿದಿದ್ದರೆ, *ಇಂದಿನ* ಎಷ್ಟು ಸಮಯವನ್ನು ಪ್ರಾರ್ಥನೆಗೆ ಕೊಡುತ್ತೇವೆ? (2) "ನಾನು ಹೆಚ್ಚು ಪ್ರಾರ್ಥಿಸಬಹುದಿತ್ತು" ಎಂದು ಪರಲೋಕದಲ್ಲಿ ನಮ್ಮಲ್ಲಿ ಹೆಚ್ಚಾದವರು ಅರಿಕೆ ಮಾಡಬಹುದಲ್ಲವೇ?

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬಿಕೆ ಇಡುವದಿಲ್ಲ.***
***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

ಟಿಪ್ಪಣಿ

[1]ಔಗುಸ್ತೀನನು ಒಬ್ಬ ದೈವಜ್ಞಾನ ಶಾಸ್ತ್ರಿ ಮತ್ತು ಬರಹಗಾರ, ಲ್ಯಾಟಿನ್ ಪಿತೃಗಳಲ್ಲಿ ಒಬ್ಬನಾಗಿದ್ದನು (ಕ್ರಿ.ಶ. 354-430).

© 2009 Truth for Today